ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಾವು ಎಷ್ಟು ಕುಡಿಯುವ ನೀರಿನ ಬಾವಿಗಳ ಕಾಮಗಾರಿಯನ್ನು ಪೂರ್ತಿಮಾಡಲಾಗಿದೆಯೆಂದು ಪ್ರಶ್ನೆ ಕೇಳಿದರೆ ಎಲ್.ಡಿ. ಸ್ಕೀಮನು, ಎನ್.ಇ.ಎಸ್. ಸ್ಕೀಮು, ಮತ್ತೊಂದು ಸ್ಕೀಮು ಮಗದೊಂದು ಸ್ಕೀಮುಗಳಿಂದ ಕುಡಿಯುವ ನೀರಿನ ಬಾವಿಗಳ ಕೆಲಸ ಇಷ್ಟು ಇನ್‌ಕಂಪ್ಲೀಟ್ ಆಗಿದೆಯೆಂದು ಹೇಳುತ್ತೀರಿ. ಆದ್ದರಿಂದ ಇನ್‌ಕಂಪ್ಲೀಟ್ ಆಗಿರುವುದು ಈಗ ಹದಿನೈದೋ ಅಥವಾ ನೂರಮುವ್ವತ್ತೋ ?

ಶ್ರೀ ವೈ. ರಾಮಚಂದ್ರ.—ಎರ್.ಡಿ. ವರ್ಕ್ಸ್ ಮೂಲಕವೇ ಹಿಂದೆ 15 ಕುಡಿಯುವ ನೀರಿನ ಬಾವಿಗಳ ಕೆಲಸವಾಗಬೇಕಾಗಿದೆಯೆಂದು ಹೇಳಿತ್ತು. ಇವತ್ತೂ ಅದನ್ನೇ ಹೇಳುತ್ತಿದ್ದೇವೆ.

ಶ್ರೀ ಎನ್. ನಂಜೇಗೌಡ.—ಈಗ 7 ಬಾವಿಗಳ ಕಾಮಗಾರಿ ಪೂರ್ತಿಯಾಗಿದೆಯೆಂದು ಉತ್ತರದಲ್ಲಿ ಹೇಳಿದೆ. ಅವುಗಳಲ್ಲಿ ನೀರು ಎಷ್ಟಿದೆ, ಅದಕ್ಕಾಗಿ ಎಷ್ಟು ಹಣವನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ ?

ಶ್ರೀ ವೈ. ರಾಮಚಂದ್ರ.—ಅದರ ವಿವರ ಬಹಳ ಇದೆ. ಇಲ್ಲಿ ಎಲ್ಲವನ್ನೂ ಹೇಳಬೇಕೆಂದರೆ ಹೇಳುತ್ತೇನೆ. 8 ಬಾವಿಗಳ ವಿವರಬೇಕಾದರೂ ಹೇಳುತ್ತೇನೆ. 7 ಬಾವಿಗಳ ಕಾಮಗಾರಿ ಈಗಾಗಲೇ ಪೂರ್ತಿಯಾಗಿದೆ.

ಶ್ರೀ ಎನ್. ನಂಜೇಗೌಡ.—ಹಿಂದೆ ನನ್ನ 133ನೇ ಪ್ರಶ್ನೆಗೆ ಉತ್ತರವಾಗಿ 135 ಕುಡಿಯುವ ನೀರಿನ ಬಾವಿಗಳ ಕಾಮಗಾರಿ ಆಗಬೇಕಾಗಿದೆಯೆಂದು ಹೇಳಿದಿರಿ. ಹಾಗಾದರೆ ಅದರಲ್ಲಿ ಒಂದೂ ಪೂರ್ತಿಯಾಗಲಿಲ್ಲವೇ ?

ಶ್ರೀ ವೈ. ರಾಮಚಂದ್ರ.—ಆ ರೀತಿಯಾಗಿಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ಅದರ ವಿವರವನ್ನು ಹೇಳುತ್ತೇನೆ. 7 ಕುಡಿಯುವ ನೀರಿನ ಬಾವಿಗಳ ಕೆಲಸ ಪೂರ್ತಿಯಾಗಿರತಕ್ಕವು ಯಾವುವೆಂದರೆ, ಚಿಕ್ಕಕಲ್ಲಳ್ಳಿ, ಚಿಕ್ಕನಾಯಕನಹಳ್ಳಿ, ದುದಕನಹಳ್ಳಿ, ಪುರ, ಅಂಜೇನಹಳ್ಳಿ, ತೊಲಸಿ ಮತ್ತು ಭದ್ರನ್‌ಕೊಪ್ಪಲ್ ಪ್ರದೇಶಗಳಲ್ಲಿನ ಬಾವಿಗಳು. ಇನ್ನೂ 8 ಬಾವಿಗಳ ಕಾಮಗಾರಿ ಪೂರ್ತಿಯಾಗಬೇಕಾಗಿದೆ. ಈ ಕೆಲಸ ಸುಮಾರು 15 ದಿನಗಳೊಳಗೆ ಅಥವಾ ಒಂದು ತಿಂಗಳೊಳಗೆ ಮುಗಿಯುತ್ತದೆ. ಆ ಬಗ್ಗೆ ನಮ್ಮಲ್ಲಿ ವರದಿ ಇದೆ.

ಶ್ರೀ ಎನ್. ನಂಜೇಗೌಡ.—7 ಕುಡಿಯುವ ನೀರಿನ ಬಾವಿಗಳ ಕಾಮಗಾರಿ ಕೆಲಸ ಪೂರ್ತಿಯಾಗಿರುವುದರ ಪೈಕಿ ಚಿಕ್ಕನಾಯಕನಹಳ್ಳಿ, ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿದೆಯೇ ?

ಶ್ರೀ ವೈ. ರಾಮಚಂದ್ರ.—ಚಿಕ್ಕನಾಯಕನಹಳ್ಳಿಯಲ್ಲ, ಚಿಕ್ಕಕಲ್ಲಳ್ಳಿ.

ಶ್ರೀ ಎನ್. ನಂಜೇಗೌಡ.—ಚಿಕ್ಕಕಲ್ಲಳ್ಳಿ ಎಂಬುದು ಕೃಷ್ಣರಾಜಪೇಟೆಯಲ್ಲಲ್ಲ.

ಶ್ರೀ ವೈ. ರಾಮಚಂದ್ರ.—ಇದೆ.

---

## Bulldozers in Public Works Department.

*Q.—71. Sri T. MADIAH GOWDA (Ramanagaram).—

Will the Government be pleased to state :—

(*a*) the number of bulldozers owned by the Public Works Department for the purpose of desilting of tanks ;

(*b*) the number of such vehicles Government intend purchasing in near future ;

(*c*) the number of tanks that are desilted during the last two years in each of the Districts in the State ;

(*d*) the extent of land brought under irrgation by such desilting during these two years ?

*A.*—Sri ALUR HANUMANTHAPPA (Deputy Minister for Minor Irrigation).—

(*a*) Desilting by bulldozers is not economical and therefore, there are no bulldozers earmarked for this purpose.

(*b*) Nil.

(*c*) Nil.

(*d*) Nil.

†ಶ್ರೀ ಟಿ. ಮಾದಯ್ಯ ಗೌಡ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಬುಲ್‌ಡೋಜರುಗಳಿಂದ ಹೂಳು ತೆಗೆಯುವುದು ಮಿತವ್ಯಯ ದೃಷ್ಟಿಯಿಂದ ಸಾಧ್ಯವಿಲ್ಲವೆಂದು ಹೇಳಿದೆ. ಹಾಗಾದರೆ ಎಷ್ಟು ಬುಲ್‌ಡೋಜರುಗಳನ್ನು ಉಪಯೋಗಿಸಿ ಎಷ್ಟು ಕೆರೆಗಳಲ್ಲಿ ಎಕ್ಸ್‌ಪೆರಿಮೆಂಟ್ ಮಾಡಿ ನೋಡಿ ಇದು ಮಿತವ್ಯಯದಿಂದಾಗುವುದಿಲ್ಲವೆಂದು ಗೊತ್ತು ಮಾಡಿದ್ದೀರಿ ? ಎಷ್ಟು ದೊಡ್ಡ ಮತ್ತು ಸಣ್ಣ ಕೆರೆಗಳಲ್ಲಿ ಇಂತಹ ಪ್ರಯೋಗಗಳನ್ನು ಮಾಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

†ಶ್ರೀ ಆಲೂರು ಹನುಮಂತಪ್ಪ.—ಬುಲ್‌ಡೋಜರುಗಳಿಂದ ಡಿ-ಸಿಲ್ಟ್ ಮಾಡತಕ್ಕದ್ದು ಇಕನಾಮಿಕಲ್ ಅಲ್ಲವೆಂದು ಚೆಕ್ನಿಕಲ್ ಪೀಪಲ್ ಅವರ ಅಭಿಪ್ರಾಯವಾದರೂ ಸಹ ನರ್ಕಾರ ಡಿ-ಸಿಲ್ಟ್ ಕಂ-ರಿಕ್ಲಮೇಷನ್ ರೀತಿ ಮಾಡಬೇಕೆಂದು ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈ ಪರಿಶೀಲನೆ ತಮ್ಮ ಗಮನದಲ್ಲಿ ಎಷ್ಟು ವರ್ಷಗಳಿಂದ ಇದೆ?

ಶ್ರೀ ಆಲೂರು ಹನುಮಂತಪ್ಪ.—ನುಮಾರು ಎರಡು ಮೂರು ವರ್ಷಗಳಿಂದಲೂ ಅಂತಹ ಬುಲ್‌ಡೋಜರುಗಳನ್ನು ರಷ್ಯಾ ದೇಶದಿಂದ ಪಡೆಯಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲದೆ ಎಲ್ಲಾ ಜಿಲ್ಲೆಗಳಲ್ಲಿಯೂ ಪೈಲಟ್ ಪ್ರಾಜೆಕ್ಟುಗಳನ್ನು ಮಾಡಬೇಕೆಂದು ಇದ್ದೇವೆ.

ಶ್ರೀ ಜಿ. ರಾಮೇಗೌಡ.—ಡಿ-ಸಿಲ್ಟ್ ಕಂ ರಿಕ್ಲಮೇಷನ್ ಕೆಲಸ ಬಹಳ ಉಪಯೋಗವಾಗಿದೆ, ಅದರಿಂದೇನೂ ನಷ್ಟವಾಗುವುದಿಲ್ಲವೆಂದು ಬೆಂಗಳೂರು ಜಿಲ್ಲೆಯಲ್ಲಿ ಮಾಡಿದಂತಹ ಕೆಲವು ಕಾಮಗಾರಿಗಳಿಂದ ನರ್ಕಾರಕ್ಕೆ ಗೊತ್ತಾಗಲಿಲ್ಲವೇ.?

ಶ್ರೀ ಆಲೂರು ಹನುಮಂತಪ್ಪ.—ಗೊತ್ತಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ಡೀಸಿಲ್ಟಿಂಗ್ ಕಂ ರೆಕ್ಲಮೇಷನ್ ಬಗ್ಗೆ ಒಂದು ಯೋಜನೆ ಇಲಾಖೆಯಲ್ಲಿದೆ ಎಂದು ತಿಳಿದುಕೊಂಡಿದ್ದೇನೆ. ಅದು ಮಿತವ್ಯಯದಿಂದ ಕೆಲಸ ಮಾಡುತ್ತದೆ ಮತ್ತು ಅದರಿಂದ ಉಪಯೋಗವಾಗುತ್ತದೆ ಎಂದು.....

ಅಧ್ಯಕ್ಷರು.—'ಕಂ' ಎಂದು ಹೇಳಿದ ಕೂಡಲೇ ಅದು ಈ ಪ್ರಶ್ನೆಯ ಹೊರಗೆ ಹೋಯಿತು. ಆದ್ದರಿಂದ ಡೀಸಿಲ್ಟಿಂಗ್ ಬಗ್ಗೆ ಮಾತ್ರ ಪ್ರಶ್ನೆ ಕೇಳಿ.

ಶ್ರೀ ಬೈರಪ್ಪಾಜಿ.—ಡೀಸಿಲ್ಟಿಂಗ್ ಮಾಡುವುದಕ್ಕೆ ಇನ್ನು ಮುಂದಾದರೂ ಕೂಡ ಬುಲ್‌ಡೋಜರುಗಳನ್ನು ತರಿಸಿ ನರ್ಕಾರ ಎಲ್ಲ ಜಿಲ್ಲೆಗಳಿಗೂ ಅವುಗಳಿಗೂ ಅವುಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತದೆಯೇ, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ನಮ್ಮ ಇಲಾಖೆಯಲ್ಲಿ ಡಿ-ಸಿಲ್ಟಿಂಗಿಗೋಸ್ಕರ ರಿಜರ್ವ ಮಾಡಿರುವ ಬುಲ್‌ಡೋಜರುಗಳಿಲ್ಲ. ಇಲಾಖೆಯಲ್ಲಿರುವ 52 ಬುಲ್‌ಡೋಜರುಗಳೂ, 20 ಟ್ರಾಕ್ಟರ್ ಬುಲ್‌ಡೋಜರುಗಳೂ ಮೈನರ್ ಇರಿಗೇಷನ್ ಯೋಜನೆಯಲ್ಲಿ ಕೆಲಸ ಮಾಡುತ್ತಿವೆ. ಅದರ ಜೊತೆಗೆ ನುಮಾರು 14 ಲಕ್ಷ ರೂಪಾಯಿ ಬೆಚ್ಚದಲ್ಲಿ ರಷ್ಯ ದೇಶದಿಂದ ಬುಲ್‌ಡೋಜರುಗಳನ್ನು ಕಾಯಿನ್ ಬೇಸಿನ್‌ನ ಮೇಲೆ ತರಲು ಪ್ರಯತ್ನ ಮಾಡುತ್ತಿದ್ದೇವೆ. ಅವು ಬಂದ ಮೇಲೆ ಎಲ್ಲ ಜಿಲ್ಲೆಗಳಲ್ಲಿಯೂ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಈಗ ಇರುವ 52 ಬುಲ್‌ಡೋಜರುಗಳ ಕೆಲಸವೇನು, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಪ್ರಾಜೆಕ್ಟ್‌ಗಳನ್ನು ಕಟ್ಟತಕ್ಕ ಕಡೆ ಮತ್ತು ರೆವರ್ ಮಾಡತಕ್ಕ ಕೆಲಸವನ್ನು ಮಾಡುತ್ತಿವೆ.

ಶ್ರೀ ಟಿ. ಮಾದಯ್ಯ ಗೌಡ.—(ಎ) ಭಾಗಕ್ಕೆ ಉತ್ತರವಾಗಿ ಬುಲ್‌ಡೋಜರುಗಳಿಂದ ಹೂಳು ತೆಗೆಯುವುದು ಮಿತವ್ಯಯವಲ್ಲ ಎಂದು ಹೇಳಿ ಬೆಂಗಳೂರು ಜಿಲ್ಲೆಯಲ್ಲಿ ಕೆರೆಗಳ ಹೂಳು ತೆಗೆಯುವುದಕ್ಕೆ ಅದರಿಂದ ಮಿತವ್ಯಯ ಎಂದು ಕಂಡುಬರುತ್ತದೆ ಎಂದು ಎರಡು ಅರ್ಥ ಬರುವ ರೀತಿಯಲ್ಲಿ ಅಪ್ಪಣೆ ಕೊಡಿಸಿದರು. ಇದರಲ್ಲಿ ಯಾವುದು ನರಿ, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಡೀಸಿಲ್ಟಿಂಗ್ ಕಂ ರೆಕ್ಲಮೇಷನ್ ಕೆಲಸಕ್ಕೆ ಉಪಯೋಗವಾಗುತ್ತದೆ, ಬರೀ ಡೀಸಿಲ್ಟಿಂಗ್ ಕೆಲಸ ಮಿತವ್ಯಯವಲ್ಲ ಎನ್ನುವ ಅಭಿಪ್ರಾಯವಿದೆ ಎಂದು ಹೇಳಿದೆ.

ಶ್ರೀ ಎಸ್. ಗೋಪಾಲ ಗೌಡ.—ಹೂಳು ತೆಗೆಯುವುದಕ್ಕೆ ಬುಲ್‌ಡೋಜರುಗಳ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ. ಆದಾಗ್ಯೂ ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಯಾವ ಕೆರೆಯೂ ಹೂಳು ತೆಗೆದಿಲ್ಲ. ಇದಕ್ಕೆ ಹೂಳು ತೆಗೆಯತಕ್ಕ ಕಾರ್ಯಕ್ರಮ ನರ್ಕಾರದ ಮುಂದೆ ಇಲ್ಲವೇ, ಇದಕ್ಕಾಗಿ ನರ್ಕಾರದಲ್ಲಿ ಹಣವಿಲ್ಲವೇ, ಅಥವಾ ಯಾವ ಕಾರಣದಿಂದ ಈ ಕೆಲಸ ನಿಂತು ಹೋಗಿದೆ, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಬುಲ್‌ಡೋಜರುಗಳು ಹೆಚ್ಚು ಸಂಖ್ಯೆಯಲ್ಲಿಲ್ಲ, ಅವನ್ನು ತರಿಸಲು ಪ್ರಯತ್ನ ಮಾಡುತ್ತಿದ್ದೇವೆ, ಅವು ಬಂದ ಕೂಡಲೇ ಈ ಕಾರ್ಯಕ್ರಮವನ್ನೆಲ್ಲ ಮಾಡುತ್ತೇವೆ.

ಶ್ರೀ ಎಸ್. ಗೋಪಾಲ ಗೌಡ.—ಹೂಳು ತೆಗೆಸುವುದಕ್ಕೆ ಬುಲ್‌ಡೋಜರುಗಳ ಆವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ. ರೆಕ್ಲೇಮೇಷನ್‌ಗೆ ಬುಲ್‌ಡೋಜರುಗಳನ್ನು ತರಿಸಿ ಉಪಯೋಗ ಮಾಡುತ್ತೇವೆಂದು ಹೇಳಿದರು. ಬುಲ್‌ಡೋಜರುಗಳ ಆವಶ್ಯಕತೆ ಇಲ್ಲದೆ ಹೂಳು ತೆಗೆಸುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಂಡಿದ್ದಾರೆಯೇ ಹೇಗೆ ?

Sri ALUR HANUMANTHAPPA.—Sir, there is no scheme at present for desilting. We have got a plan for desilting-cum-reclamation. This scheme has been proved very successful and also very economic. So, we are trying to get bulldozers from Russia as soon as possible.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಬಹಳ ವರ್ಷಗಳಿಂದಲೂ ಹೂಳು ತೆಗೆಸುವ ಯೋಜನೆ ಇದೆ. ಅದಕ್ಕೆ ಬುಲ್‌ಡೋಜರುಗಳೆಲ್ಲ ಎಂದು ಹೇಳುತ್ತಾರೆ. ಮೈಸೂರು ರಾಜ್ಯದೊಳಗೆ ಅನೇಕ ಕೆರೆಗಳಲ್ಲಿ ನೀರಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಎಲ್ಲ ಕೆರೆಗಳಲ್ಲಿಯೂ ಹೂಳನ್ನು ತೆಗೆಸುವುದಕ್ಕೆ ತಕ್ಷಣ ವ್ಯವಸ್ಥೆ ಮಾಡುವ ವಿಷಯವನ್ನು ಪರಿಶೀಲಿಸುತ್ತಾರೆಯೇ, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಸಾಧ್ಯವಾದಮಟ್ಟಿಗೂ ಇಂಥ ತುರ್ತು ಪರಿಸ್ಥಿತಿಯಲ್ಲಿ ಮಾನ್ಯ ನದನ್ಯರಾದ ಎಸ್. ಗೋಪಾಲ ಗೌಡರು ಮತ್ತು ಕೆ. ಪಿ. ರೇವಣ ಸಿದ್ದಪ್ಪನವರು ಹೇಳಿದ ಹಾಗೆ ನಣ್ಣ ನಣ್ಣ ಕೆರೆಗಳಲ್ಲಿ ಹೂಳು ತೆಗೆಯಲು ನಮ್ಮಲ್ಲಿರುವ ಮಾನವ ಶಕ್ತಿಯನ್ನು ಉಪಯೋಗಿಸಿಕೊಂಡು, ಇರಾಖೆಯಲ್ಲಿರುವ ಸಿಬ್ಬಂದಿಯ ಮೂಲಕ ಕೆಲಸ ಮಾಡಿಸುವ ಸಲಹೆಯನ್ನು ನಾನು ಸ್ವಾಗತಿಸುತ್ತೇನೆ.

Sri N. O. SAMAJI.—(Marathi).

Mr. SPEAKER.—It is purely hypothetical.

Sri N. O. SAMAJI (Marathi Translated).—ಅನೇಕ ಕೆರೆಗಳು ಮಣ್ಣು ತುಂಬಿ ಉಪಯೋಗವಾಗುವುದಿಲ್ಲ, ಅವುಗಳ ಮಣ್ಣು ತೆಗೆದು ಉಪಯೋಗವಾಗುವಂತೆ ಮಾಡುವುದಕ್ಕೆ ಎಷ್ಟು ದಿವಸ ಬೇಕು, ಯಾವ ರೀತಿ ಮಾಡುತ್ತೀರಿ ? ಈ ಕೆಲಸ ಮಾಡುವುದರಿಂದ ಹೆಚ್ಚು ಆಹಾರ ಧಾನ್ಯ ಬೆಳೆಯಲು ಅನುಕೂಲವಾಗುವುದಿಲ್ಲವೆ ?

Mr. SPEAKER.—Several schemes costing crores were submitted to the Central Government.

ಶ್ರೀ ಎಸ್. ಎಂ. ಕೃಷ್ಣ.—ಮೈಸೂರು ರಾಜ್ಯದಲ್ಲಿರುವ ಕೆರೆಗಳ ಹೂಳು ತೆಗೆಸುವುದಕ್ಕೆ ನಾಲ್ಕು ವರ್ಷದ ಕೆಳಗೆ ಕೇಂದ್ರ ಸರ್ಕಾರಕ್ಕೆ ಏನೊಂದು ಕಾರ್ಯಕ್ರಮವನ್ನು ಕಳಿಸಿಕೊಟ್ಟಿದ್ದೀರೊ ಅದು ಕಾರ್ಯಗತ ಆಗಬೇಕಾದರೆ ಎಷ್ಟು ಹಣ ಬೇಕಾಗುತ್ತದೆ ಎನ್ನುವುದರ ಅಂದಾಜನ್ನು ತಯಾರಿಸಿದ್ದೀರಾ ?

Mr. SPEAKER.—How does it arise ?

ಶ್ರೀ ಎಸ್. ಎಂ. ಕೃಷ್ಣ.—ಆಹಾರದ ವಿಚಾರದಲ್ಲಿ ಸ್ವಯಂ ಪರಿಪೂರ್ಣತೆಯನ್ನು ಸಾಧಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರ ಈ ಬಗ್ಗೆ ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಳ್ಳುವುದರ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆಯೇ, ಸ್ವಾಮಿ ?

Mr. SPEAKER.—I will deal with it later. Next Question.

---

1-30 P.M.

## Construction of Kallubhavi Halla in Yelburga Taluk.

*Q.—78. Sri VEERABHADRAPPA ERAPPA (Yelburga).—

Will the Government be pleased to state :—

(*a*) when the contract for the construction of Kallubhavi Halla in Yelburga Taluk was given ;